ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 596 (746) |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ Japanese Encephalitis (JE) ರೋಗದ ಎಂಡೆಮಿಕ್ (Endemic) ಜಿಲ್ಲೆಗಳೆಂದು ಗುರುತಿಸಲಾಗಿದೆ; ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | Japanese Encephalitis (J.E) ಮೆದುಳು ಜ್ವರಕ್ಕೆ ಲಸಿಕೆ ನೀಡುವ ಅಭಿಯಾನವನ್ನು ರಾಜ್ಯದಲ್ಲಿ 2007 ರಲ್ಲಿ 8 ಜಿಲ್ಲೆಗಳಲ್ಲಿ (ವಿಜಯಪುರ, ರಾಯಚೂರು, ಕೊಪ್ಪಳ, ಧಾರವಾಡ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ ಮತ್ತು ಬಳ್ಳಾರಿ) ಜೆಇ ಲಸಿಕಾ ಅಭಿಯಾನವನ್ನು ನಡೆಸಲಾಯಿತು.<br><br>ತದನಂತರ 2013 ರಲ್ಲಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜೆಇ ಲಸಿಕಾ ಅಭಿಯಾನವನ್ನು ನಡೆಸಲಾಯಿತು.<br><br>ಅಭಿಯಾನದ ನಂತರ ಈ 10 ಜಿಲ್ಲೆಗಳಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಜಪಾನೀಸ್ ಎನ್‌ಸೆಫಲೈಟಿಸ್ (ಜೆಇ) ಲಸಿಕೆಯನ್ನು ಹುಟ್ಟಿದ ಎಲ್ಲಾ ಮಕ್ಕಳಿಗೆ 2 ಡೋಸ್‌ನಂತೆ ನೀಡಲಾಗುತ್ತಿದೆ. ಮೊದಲನೇ ಡೋಸ್ ಅನ್ನು 9-11 ನೇ ತಿಂಗಳಲ್ಲಿ ಹಾಗೂ 2ನೇ ಡೋಸ್ ಅನ್ನು 16-23 ನೇ ತಿಂಗಳಲ್ಲಿ ನೀಡಲಾಗುತ್ತಿದೆ.<br><br>ಮುಂದುವರೆದು, ಡಿಸೆಂಬರ್ 2022 ಮತ್ತು ಜನವರಿ 2023 ರಲ್ಲಿ 1-15 ವರ್ಷದ ಮಕ್ಕಳಿಗೆ 11 ಜಿಲ್ಲೆಗಳಲ್ಲಿ (ಬಾಗಲಕೋಟೆ, ದಕ್ಷಿಣ ಕನ್ನಡ, ಗದಗ, ಕಲಬುರ್ಗಿ, ಹಾಸನ, ಹಾವೇರಿ, ರಾಮನಗರ, ತುಮಕೂರು, ಉಡುಪಿ, ಯಾದಗಿರಿ ಮತ್ತು ವಿಜಯನಗರ) ಜೆಇ ಲಸಿಕಾ ಅಭಿಯಾನವನ್ನು ನಡೆಸಲಾಯಿತು.<br><br>ನಂತರ ಈ ಹೆಚ್ಚುವರಿ 11 ಜಿಲ್ಲೆಗಳನ್ನು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ ಒಳಗೊಳ್ಳಲಾಯಿತು. ಪ್ರಸ್ತುತ ಒಟ್ಟು ಈ 21 ಜಿಲ್ಲೆಗಳಲ್ಲಿ ಜೆಇ ಲಸಿಕೆಯನ್ನು ಅರ್ಹ ಮಕ್ಕಳಿಗೆ ಎರಡು ಡೋಸ್‌ನಂತೆ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಉಚಿತವಾಗಿ ನೀಡಲಾಗುತ್ತಿದೆ.<br><br>ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ (NVBDCP) ಅಡಿಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಅನ್ವಯ, ಮಲೇರಿಯಾ, ಡೆಂಗಿ, ಚಿಕುಂಗುನ್ಯ, ಆನೆಕಾಲು ರೋಗ, ಕಾಲಾ ಅಜಾರ್ (ಕರ್ನಾಟಕದಲ್ಲಿ ವರದಿಯಾಗಿರುವುದಿಲ್ಲ) ಹಾಗೂ ಮೆದುಳು ಜ್ವರ ರೋಗಗಳ ಮುಂಜಾಗ್ರತಾ ಹಾಗೂ ನಿಯಂತ್ರಣ ಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಮೆದುಳು ಜ್ವರವು ವೈರಸ್‌ನಿಂದ ಉಂಟಾಗುವ ಸೋಂಕಾಗಿದ್ದು, ಕ್ಯೂಲೆಕ್ಸ್ ಗುಂಪಿನ ಸೊಳ್ಳೆ (ರೋಗ ವಾಹಕ) ಗಳಿಂದ ಹರಡುವ ರೋಗವಾಹಕ ಆಶ್ರಿತ ರೋಗವಾಗಿದೆ. ರೋಗವಾಹಕಗಳ ವಂಶಾಭಿವೃದ್ಧಿಗೆ ಸೂಕ್ತ ವಾತಾವರಣ (ಭತ್ತ/ ಕಬ್ಬಿನ ಗದ್ದೆಗಳು, ನೀರಾವರಿ ಪ್ರದೇಶಗಳು, ಇತ್ಯಾದಿ), ಹಂದಿಗಳು (amplifying hosts) ಹಾಗೂ ವಲಸೆ ಹಕ್ಕಿಗಳು (Ardeid birds) ಇವುಗಳ ಪರಸ್ಪರ ಕ್ರಿಯೆ (interaction) ಯು ಈ ಸೋಂಕಿನ ಪ್ರಸರಣಕ್ಕೆ ಪೂರಕ ವಾತಾವರಣವನ್ನು ಒದಗಿಸುತ್ತವೆ. ಮುಂದುವರೆದು, ಮೆದುಳು ಜ್ವರವನ್ನು ಹೊರತುಪಡಿಸಿ, ಇನ್ನೂ ಅನೇಕ ಕಾರಣಗಳಿಂದ, ಮೆದುಳಿನ ಸೋಂಕು ಉಂಟಾಗುವುದರಿಂದ, Epidemiological Surveillance for Acute Encephalitis ನ ಮೂಲಕ ಮೆದುಳು ಜ್ವರದ ವೈರಸ್ ಇರುವಿಕೆಯನ್ನು ಖಚಿತಪಡಿಸಿಕೊಳ್ಳುವುದು, ದೃಢಪಟ್ಟ ಮೆದುಳುಜ್ವರ ಪ್ರಕರಣಗಳು / ಮರಣಗಳು ವರದಿಯಾಗುವುದು ರೋಗವಾಹಕಗಳ ಸಾಂದ್ರತೆ, ರೋಗವಾಹಕಗಳಲ್ಲಿ ವೈರಸ್ ನ ಇರುವಿಕೆ |

| | | |
|---|---|---|
| | | ದೃಢವಾಗುವುದು ಮತ್ತು ಹಂದಿಗಳು / ಆರ್ಡಿಡ್ ಹಕ್ಕಿಗಳಲ್ಲಿ ಮೆದುಳು ಜ್ವರದ ವೈರಸ್ ಇರುವಿಕೆ ಪತ್ತೆಯಾದಲ್ಲಿ ಅಂತಹ ಪ್ರದೇಶವನ್ನು ಮೆದುಳು ಜ್ವರಕ್ಕೆ ಎಂಡೆಮಿಕ್ ಪ್ರದೇಶವೆಂದು ಪರಿಗಣಿಸಿ ಗುರುತಿಸಲಾಗುವುದು. ಹಾಗೂ ಇಂತಹ ಪ್ರದೇಶಗಳಲ್ಲಿ ಮೆದುಳು ಜ್ವರ ಮುಂಜಾಗ್ರತೆ ಮತ್ತು ನಿಯಂತ್ರಣ ಕ್ರಮಗಳನ್ನು ಆದ್ಯತೆಯ ಮೇಲೆ ಅನುಷ್ಠಾನಗೊಳಿಸಲಾಗುತ್ತದೆ. |
| ಆ | ರಾಜ್ಯದಲ್ಲಿ 2016 ರಿಂದ ಇದುವರೆಗೂ ಪತ್ತೆಯಾದ J.E ಪ್ರಕರಣಗಳ ಮತ್ತು ಸಾವಿನ ಸಂಖ್ಯೆ ಎಷ್ಟು; (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 2016 ರಿಂದ ಇದುವರೆಗೂ ಪತ್ತೆಯಾದ JE ಪ್ರಕರಣಗಳ ಮತ್ತು ಸಾವಿನ ಸಂಖ್ಯೆಯನ್ನು ಅನುಬಂಧ - 1 ರಲ್ಲಿ ನೀಡಲಾಗಿದೆ. |
| ಇ | ರೋಗ ಪತ್ತೆಗೆ ಲ್ಯಾಬೋರೇಟರಿಗಳನ್ನು ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ; ಈ ಕಾಯಿಲೆ ಎಷ್ಟು ವರ್ಷದೊಳಗಿನ ಮಕ್ಕಳಲ್ಲಿ ಕಂಡು ಬರುತ್ತದೆ ಇದರ ಲಕ್ಷಣಗಳೇನು; ಏನಾದರೂ ದೈಹಿಕ ಆರೋಗ್ಯ ಸಮಸ್ಯೆಗಳು ಕಂಡು ಬರಲಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ ಖಚಿತ ಮೆದುಳು ಜ್ವರ ಪ್ರಕರಣಗಳ ಪತ್ತೆಗಾಗಿ, ಒಟ್ಟು 7 Sentinel Surveillance Laboratory ಗಳನ್ನು ಸ್ಥಾಪಿಸಲಾಗಿದೆ. ಸದರಿ ಪ್ರಯೋಗ ಶಾಲೆಗಳ ವಿವರಗಳು ಈ ಕೆಳಗಿನಂತಿವೆ.<br>1. National Institute of Mental Health & Neuro Sciences Bengaluru.<br>2. Integrated Public Health Laboratory Kolar<br>3. Vijayanagara Institute of Medical Sciences Ballari<br>4. Karnataka Institute of Medical Sciences Hubli<br>5. Manipal Institute of Virology Manipal<br>6. Integrated Public Health Laboratory Hassan<br>7. Integrated Public Health Laboratory Dakshina Kannada<br><br>ಇವುಗಳ ಪೈಕಿ, ನಿಮ್ಹಾನ್ಸ್ ಸಂಸ್ಥೆಯು ಮೆದುಳು ಜ್ವರ ಪತ್ತೆಗೆ ರಾಜ್ಯ ಮಟ್ಟದ ಅಪೆಕ್ಸ್ ಲ್ಯಾಬೊರೇಟರಿಯಾಗಿದೆ.<br><br>ರಾಜ್ಯದ 31 ಜಿಲ್ಲೆಗಳು ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಶಂಕಿತ ಮೆದುಳು ಜ್ವರ ಪ್ರಕರಣಗಳ Serum / Cerebro Spinal Fluid (CSF) ಮಾದರಿಗಳನ್ನು ಸಲ್ಲಿಸಲು ಈ ಮೇಲೆ ತಿಳಿಸಿದ 7 ಲ್ಯಾಬೋರೇಟರಿಗಳಿಗೆ mapping ಮಾಡಲಾಗಿದ್ದು, ಅದರಂತೆ, ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.<br><br>ಮೆದುಳು ಜ್ವರದ ಸೋಂಕು ಸಾಮಾನ್ಯವಾಗಿ 15 ವರ್ಷದ ಒಳಗಿನ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆದಾಗ್ಯೂ, ವಯಸ್ಕರಲ್ಲಿಯೂ ಸಹ ಮೆದುಳು ಜ್ವರ ಪ್ರಕರಣಗಳು ವರದಿಯಾಗುತ್ತವೆ.<br><br>ಮೆದುಳು ಜ್ವರದ ಲಕ್ಷಣಗಳು: ಜ್ವರ, ತಲೆನೋವು, ಕತ್ತಿನ ಬಿಗಿತ, ತಲೆ ಸುತ್ತುವಿಕೆ, ಜ್ಞಾನ ತಪ್ಪುವುದು, ಅಸಂಬದ್ಧವಾಗಿ ಮಾತನಾಡುವುದು, ವ್ಯಕ್ತಿಗಳನ್ನು ಗುರುತಿಸದೇ ಇರುವುದು, ಕಾಯಿಲೆಯು ಉಲ್ಬಣಗೊಂಡಾಗ ಮೆದುಳು ಊತಗೊಂಡು ಸಾವು ಸಂಭವಿಸಬಹುದು. ಆದುದರಿಂದ, ಆರಂಭಿಕ ಲಕ್ಷಣಗಳು ಕಂಡು ಬಂದೊಡನೆ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಅಗತ್ಯ ವೈದ್ಯಕೀಯ ಸಲಹೆ ಮತ್ತು ಆರೈಕೆಯನ್ನು ಪಡೆಯುವುದು ಅಗತ್ಯವಾಗಿದೆ. ಮೆದುಳು ಜ್ವರದ ವೈರಸ್ ರೋಗಿಯ ಕೇಂದ್ರ ನರ ಮಂಡಲಕ್ಕೆ (Central Nervous System) ಹಾನಿ ಮಾಡುವುದರಿಂದ, ರೋಗ ಲಕ್ಷಣಗಳಿಂದ ಸಂಪೂರ್ಣವಾಗಿ ಗುಣಮುಖರಾದ ಕೆಲವು ಪ್ರಕರಣಗಳಿಗೆ ಜೀವನ ಪೂರ್ತಿ ಅಂಗವೈಕಲ್ಯ (Sequale) ವು ಬಾಧಿಸುತ್ತದೆ. ಇಂತಹ ಸಂದರ್ಭಗಳಲ್ಲಿ Pediatric Rehabilitation Centre ಗಳಲ್ಲಿ ಅಗತ್ಯ Physiotherapy ಸೌಲಭ್ಯವು ಲಭ್ಯವಿದೆ. |

ಈ

ಮಕ್ಕಳಿಗೆ ಈ ರೋಗದ ವಿರುದ್ಧ ಲಸಿಕೆ ಹಾಕಲು ಸರ್ಕಾರ ವಿಶೇಷ ಲಸಿಕಾ ಅಭಿಯಾನ ಕೈಗೊಳ್ಳುವುದೇ; ಹಾಗಿದ್ದಲ್ಲಿ ಅಂದಾಜು ಎಷ್ಟು ಲಕ್ಷ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ; ಇದಕ್ಕೆ ಎಷ್ಟು ಡೋಸ್ ಲಸಿಕೆ ಅವಶ್ಯವಿದೆ; (ಸಂಪೂರ್ಣ ವಿವರ ನೀಡುವುದು)

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿಯಲ್ಲಿ ಜಪಾನೀಸ್ ಎನ್‌ಸೆಫಲೈಟಿಸ್ (ಜೆಇ) ಲಸಿಕೆಯನ್ನು ಆಯ್ದ 21 ಎಂಡೆಮಿಕ್ ಜಿಲ್ಲೆಗಳಲ್ಲಿ ಹುಟ್ಟಿದ ನಂತರ ಎಲ್ಲಾ ಮಕ್ಕಳಿಗೆ 2 ಡೋಸ್‌ನಂತೆ ನೀಡಲಾಗುತ್ತಿದೆ. ಮೊದಲನೇ ಡೋಸ್ ಅನ್ನು 9-11 ನೇ ತಿಂಗಳಲ್ಲಿ ಹಾಗೂ 2ನೇ ಡೋಸ್ ಅನ್ನು 16-23 ನೇ ತಿಂಗಳಲ್ಲಿ ನೀಡಲಾಗುತ್ತಿದೆ.

**Coverage of JE-1 and JE2 as on 17.05.2025**

| Sl No. | Name of the district | April 2024 to March 2025 (Target) | April 2024 to March 2025 (Ach.) | | | |
|---|---|---|---|---|---|---|
| | | | JE-1 | | JE-2 | |
| | | | Achi. | % | Achi. | % |
| 1 | Bagalkote | 37513 | 38694 | 103 | 37248 | 99 |
| 2 | Bellary | 31695 | 32107 | 101 | 31672 | 100 |
| 3 | Chikkaballapur | 18223 | 18930 | 104 | 18749 | 103 |
| 4 | Chitradurga | 25796 | 27113 | 105 | 25891 | 100 |
| 5 | Dakshina Kannada | 29122 | 30053 | 103 | 26877 | 92 |
| 6 | Davanagere | 25550 | 27791 | 109 | 27666 | 108 |
| 7 | Dharwad | 33170 | 34107 | 103 | 34718 | 105 |
| 8 | Gadag | 18012 | 18592 | 103 | 18088 | 100 |
| 9 | Hassan | 25111 | 21135 | 84 | 20321 | 81 |
| 10 | Haveri | 27083 | 28539 | 105 | 27026 | 100 |
| 11 | Kalburgi | 63886 | 59907 | 94 | 54711 | 86 |
| 12 | Kolar | 23818 | 23368 | 98 | 23502 | 99 |
| 13 | Koppal | 34159 | 30193 | 88 | 28833 | 84 |
| 14 | Mandya | 21190 | 20537 | 97 | 20246 | 96 |
| 15 | Raichur | 46254 | 41528 | 90 | 40154 | 87 |
| 16 | Ramanagar | 13720 | 13979 | 102 | 13679 | 200 |
| 17 | Tumkur | 34950 | 39758 | 114 | 37195 | 106 |
| 18 | Udupi | 13375 | 12869 | 96 | 12810 | 96 |
| 19 | Vijayanagara | 28004 | 28802 | 103 | 27953 | 100 |
| 20 | Vijayapura | 60231 | 56469 | 94 | 55440 | 94 |
| 21 | Yadgir | 33616 | 32237 | 96 | 30125 | 90 |

<table>
<tr>
<td></td>
<td></td>
<td>
<table>
<tr><td>Total</td><td>644478</td><td>636708</td><td>99</td><td>613904</td><td>95</td></tr>
</table>
ಜೆಇ ಲಸಿಕೆಗಳನ್ನು ಕೇಂದ್ರ ಸರ್ಕಾರದಿಂದ ಮಕ್ಕಳ ಸಂಖ್ಯೆ ಆಧರಿಸಿ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ. ರಾಜ್ಯದಲ್ಲಿ ಈ ಲಸಿಕೆಯನ್ನು ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ ಸ್ಥಿರ ಮತ್ತು outreach ಸ್ಥಳಗಳಲ್ಲಿ ಅರ್ಹ ವಯೋಮಾನದ ಮಕ್ಕಳಿಗೆ ಉಚಿತವಾಗಿ ಲಸಿಕೆಯನ್ನು ನೀಡಲಾಗುತ್ತಿದೆ.
</td>
</tr>
<tr>
<td>ಉ</td>
<td>ರಾಜ್ಯದಲ್ಲಿ ಯಾವ ಯಾವ ವರ್ಷದ ವೇಳೆಗೆ Japanese Encephalitis (J.E.) ರೋಗವನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ?</td>
<td>
Japanese Encephalitis (J.E) ರೋಗವನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಪ್ರಸ್ತಾವನೆಯು ಸದ್ಯಕ್ಕಿರುವುದಿಲ್ಲ. ಆದಾಗ್ಯೂ, NHM_ NVBDCP ಯ ಗುರಿಯ ಅನ್ವಯ Japanese Encephalitis ನ ನಿಯಂತ್ರಣದ ಸಂಬಂಧ ಮೆದುಳು ಜ್ವರದಿಂದ ವಾರ್ಷಿಕ ಮರಣ ಪ್ರಮಾಣವು (Case Fatality Rate, CFR) ಶೇಕಡಾ 30 ಕ್ಕಿಂತ ಕಡಿಮೆ ಇರಬೇಕಿದೆ. ಅದರಂತೆ ಕಳೆದ 6 ವರ್ಷಗಳಲ್ಲಿ ರಾಜ್ಯದ CFR ನ ವಿವರಗಳು ಇಂತಿವೆ.
<table>
<tr><td>ವರ್ಷ</td><td>2019</td><td>2020</td><td>2021</td><td>2022</td><td>2023</td><td>2024</td></tr>
<tr><td>Case Fatality Rate (CFR)</td><td>12%</td><td>11%</td><td>8%</td><td>3%</td><td>6%</td><td>9%</td></tr>
</table>
ಆದುದರಿಂದ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ, ಮೆದುಳು ಜ್ವರ ನಿಯಂತ್ರಣ ಹಾಗೂ ಮುಂಜಾಗ್ರತಾ ಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪರಿಸ್ಥಿತಿಯು ನಿಯಂತ್ರಣದಲ್ಲಿದೆ.
</td>
</tr>
</table>

ಆಕುಕ 122 ಎಸ್‌ಎಂಎಂ 2025

(ದಿನೇಶ್ ಗುಂಡೂರಾವ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅನುಬಂಧ - 1

| Sl. No. | Districts | 2016 | | 2017 | | 2018 | | 2019 | | 2020 | | 2021 | | 2022 | | 2023 | | 2024 | | 2025 Upto July | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | JE | JE Death | JE | JE Death | JE | JE Death | JE | JE Death | JE | JE Death | JE | JE Death | JE | JE Death | JE | JE Death | JE | JE Death | JE | JE Death |
| 1 | Bangalore (U) | 1 | 0 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 2 | Bangalore (R) | 0 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 3 | Ramanagara | 0 | 0 | 1 | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 4 | Kolar | 0 | 0 | 1 | 0 | 1 | 0 | 2 | 0 | 3 | 0 | 7 | 0 | 6 | 0 | 1 | 0 | 1 | 0 | 0 | 0 |
| 5 | Chikaballapura | 2 | 0 | 2 | 0 | 0 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 |
| 6 | Tumkur | 0 | 0 | 1 | 0 | 0 | 0 | 2 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 |
| 7 | Chitradurga | 0 | 0 | 0 | 0 | 0 | 0 | 2 | 0 | 0 | 0 | 0 | 0 | 1 | 0 | 1 | 0 | 2 | 0 | 0 | 0 |
| 8 | Davanagere | 0 | 0 | 0 | 0 | 1 | 0 | 1 | 0 | 0 | 0 | 0 | 0 | 1 | 0 | 1 | 0 | 1 | 0 | 1 | 0 |
| 9 | Shimoga | 1 | 0 | 1 | 0 | 0 | 0 | 0 | 0 | 1 | 0 | 1 | 0 | 0 | 0 | 2 | 0 | 0 | 0 | 0 | 0 |
| 10 | Belgaum | 0 | 0 | 0 | 0 | 4 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 11 | Bijapur | 0 | 0 | 0 | 0 | 0 | 0 | 1 | 0 | 0 | 0 | 3 | 1 | 1 | 0 | 7 | 0 | 4 | 0 | 1 | 0 |
| 12 | Bagalkote | 0 | 0 | 0 | 0 | 1 | 0 | 1 | 0 | 1 | 0 | 2 | 1 | 1 | 0 | 1 | 0 | 0 | 0 | 0 | 0 |
| 13 | Dharwar | 0 | 0 | 0 | 0 | 1 | 1 | 0 | 0 | 0 | 0 | 1 | 0 | 0 | 0 | 0 | 0 | 2 | 1 | 0 | 0 |
| 14 | Gadag | 0 | 0 | 0 | 0 | 0 | 0 | 2 | 0 | 0 | 0 | 1 | 0 | 1 | 0 | 4 | 0 | 3 | 1 | 1 | 0 |
| 15 | Haveri | 0 | 0 | 1 | 0 | 0 | 0 | 1 | 0 | 0 | 0 | 0 | 0 | 12 | 0 | 0 | 0 | 1 | 0 | 0 | 0 |
| 16 | Uttara Kannada | 0 | 0 | 1 | 0 | 2 | 0 | 0 | 0 | 0 | 0 | 1 | 0 | 1 | 0 | 2 | 0 | 1 | 0 | 0 | 0 |
| 17 | Kalburgi | 2 | 0 | 0 | 0 | 0 | 0 | 1 | 0 | 0 | 0 | 1 | 0 | 0 | 0 | 1 | 0 | 0 | 0 | 1 | 0 |
| 18 | Yadageri | 0 | 0 | 2 | 0 | 2 | 0 | 4 | 0 | 1 | 1 | 2 | 0 | 1 | 0 | 3 | 0 | 1 | 0 | 0 | 0 |
| 19 | Bidar | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 20 | Bellary | 0 | 0 | 0 | 0 | 2 | 0 | 4 | 0 | 2 | 0 | 1 | 0 | 2 | 0 | 0 | 0 | 5 | 0 | 0 | 0 |
| 21 | Vijayanagara | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 3 | 0 |
| 22 | Raichur | 0 | 0 | 3 | 0 | 4 | 0 | 0 | 0 | 4 | 0 | 0 | 0 | 0 | 0 | 4 | 1 | 0 | 0 | 0 | 0 |
| 23 | Koppal | 0 | 0 | 0 | 0 | 1 | 0 | 1 | 0 | 0 | 0 | 0 | 0 | 1 | 0 | 0 | 0 | 3 | 0 | 1 | 0 |
| 24 | Mysore | 0 | 0 | 1 | 0 | 1 | 0 | 1 | 0 | 0 | 0 | 1 | 0 | 0 | 0 | 1 | 0 | 0 | 0 | 0 | 0 |
| 25 | Chamarajanagar | 0 | 0 | 0 | 0 | 2 | 0 | 0 | 0 | 0 | 0 | 0 | 0 | 2 | 0 | 0 | 0 | 0 | 0 | 0 | 0 |
| 26 | Mandya | 0 | 0 | 1 | 0 | 0 | 0 | 1 | 0 | 0 | 0 | 1 | 0 | 1 | 0 | 0 | 0 | 0 | 0 | 0 | 0 |
| 27 | Hassan | 0 | 0 | 1 | 0 | 0 | 0 | 1 | 0 | 0 | 0 | 0 | 0 | 0 | 0 | 0 | 0 | 2 | 0 | 0 | 0 |
| 28 | D. Kannada | 3 | 0 | 2 | 1 | 1 | 0 | 1 | 0 | 1 | 0 | 1 | 0 | 0 | 0 | 1 | 1 | 0 | 0 | 0 | 0 |
| 29 | Udupi | 2 | 0 | 1 | 0 | 6 | 2 | 5 | 0 | 6 | 1 | 1 | 0 | 2 | 1 | 1 | 0 | 3 | 1 | 0 | 0 |
| 30 | Chikmangalore | 0 | 0 | 0 | 0 | 2 | 1 | 1 | 0 | 0 | 0 | 1 | 0 | 0 | 0 | 1 | 0 | 1 | 0 | 0 | 0 |
| 31 | Kodagu | 0 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 32 | BBMP | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 |
| Total | | 11 | 0 | 26 | 2 | 35 | 5 | 33 | 0 | 19 | 2 | 25 | 2 | 33 | 1 | 32 | 2 | 31 | 3 | 13 | 0 |

JOINT DIRECTOR-NVBDCP
Directorate of Health & FW Services
Arogya Soudha, Magadi Road
Bengaluru-560023